ಶಿಕ್ಷಣ
13 APR 2015

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಸಿ4(10)ಸ.ಪ್ರೌಆಂ.ಮಂ87 /2014-15 ದಿನಾಂಕ:07-4-2015

**ಜ್ಞಾಪನಾ**

ವಿಷಯ: 2015-16ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ 8ನೇ ತರಗತಿಯಲ್ಲಿ ಆಂಗ್ಲಮಾಧ್ಯಮ ವಿಭಾಗವನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ, ಇವರ ಪತ್ರ ಸಂಖ್ಯೆ:ಎ1.ಪ್ರೌಶಾ.ಆಂಗ್ಲ ವಿಭಾಗ1/2012-13 ದಿನಾಂಕ:06-03-2015.

---

**ಪ್ರಸ್ತಾವನೆ:**

ಉಲ್ಲೇಖಿತ ಪತ್ರಗಳಲ್ಲಿ ಉಡುಪಿ ಜಿಲ್ಲೆಯಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ 2015-16ನೇ ಸಾಲಿಗೆ 8ನೇ ತರಗತಿಯಲ್ಲಿ ಆಂಗ್ಲಮಾಧ್ಯಮ ವಿಭಾಗವನ್ನು ತೆರೆಯಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

30782
17/04/15

**ಆದೇಶ:**

ಪ್ರಸ್ತಾವನೆಯಲ್ಲಿ ಪರಿಶೀಲಿಸಲಾಗಿ 2015-16ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆ, ಗುಜ್ಜಾಡಿ, ಬೈಂದೂರು ತಾಲ್ಲೂಕು, ಸರ್ಕಾರಿ ಪ್ರೌಢಶಾಲೆ,ವಡೇರಹೋಬಳಿ,ಕುಂದಾಪುರ ತಾಲ್ಲೂಕು, ಸರ್ಕಾರಿ ಪ್ರೌಢಶಾಲೆ, ಜಾನುವಾರಕಟ್ಟೆ, ಬ್ರಹ್ಮಾವರ ವಲಯ, ಉಡುಪಿ ಜಿಲ್ಲೆ ಇಲ್ಲಿ 8ನೇ ತರಗತಿಯಲ್ಲಿ ಒಂದು ಆಂಗ್ಲ ಮಾಧ್ಯಮ ವಿಭಾಗವನ್ನು ತೆರೆಯಲು ಅನುಮತಿಯನ್ನು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ನೀಡಿದೆ.

A1

1. 2015-16ನೇ ಸಾಲಿನಿಂದ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ವಿಭಾಗ ತೆರೆಯಲು ಅನುಮತಿಸಿದೆ.

2.ಎಸ್.ಡಿ.ಎಂ.ಸಿ ನಡಾವಳಿಯ ನಂತರ ಪ್ರಾರಂಭಿಸುವುದು.

3.ಮೂಲಭೂತ ಸೌಕರ್ಯಗಳು ಇರುವುದನ್ನು ಖಚಿತಪಡಿಸಿಕೊಂಡು ಪ್ರಾರಂಭಿಸುವುದು.

4. ಕೊರತೆಯಿರುವ ಮೂಲಭೂತ ಸೌಕರ್ಯಗಳಿಗೆ ಸಾರ್ವಜನಿಕ/ಎಸ್.ಡಿ.ಎಂ.ಸಿ ಸಹಕಾರದಿಂದ ಇವುಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು.

5. ಸಾರ್ವಜನಿಕ ನೈಜ ದೂರು/ಆಕ್ಷೇಪಣೆಗಳಿದ್ದಲ್ಲಿ ಆಂಗ್ಲ ಮಾಧ್ಯಮವನ್ನು ಪ್ರಾರಂಭಿಸಬಾರದು.

6. ಕನ್ನಡ ಮತ್ತು ಆಂಗ್ಲ ಮಾಧ್ಯಮಗಳೆರಡರಲ್ಲೂ ಕನಿಷ್ಟ ದಾಖಲಾತಿ/ಹಾಜರಾತಿ ಕಾಯ್ದುಕೊಳ್ಳತಕ್ಕದ್ದು.

7.ಹಾಲಿ ಇರುವ ಶಿಕ್ಷಕರೆ ಈ ಆಂಗ್ಲ ಮಾಧ್ಯಮ ತರಗತಿಗಳಿಗೆ ಬೋಧನೆ ಮಾಡುವುದು.

8..ಹೆಚ್ಚುವರಿಯಾಗಿ ಶಿಕ್ಷಕರ ಬೇಡಿಕೆ ಕೋರಬಾರದು ಮತ್ತು ಸರ್ಕಾರಕ್ಕೆ ಯಾವುದೇ ಹೊರೆಯಾಗಬಾರದು.

82
15/4/2015

16/4

Kulouaah
ನಿರ್ದೇಶಕರು(ಪ್ರೌಢಶಿಕ್ಷಣ)

79

ಪ್ರತಿಯನ್ನು:

1. ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ.

2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೈಂದೂರು, ಕುಂದಾಪುರ,ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ

3. ಕ/ಪ್ರ.